–   –                                    ಸಿಸಿ ನಂಬರಃ 811/2025

ಸಾಕ್ಷಿಃ ಸಿಡಬ್ಲ್ಯೂಃ 4, ಪಿ.ಡಬ್ಲ್ಯೂಃ 4

**(ಇಂದು ತಾಃ 20/12/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಜೆ ಎನ್ ವಕೀಲರಿಂದ,**

ಸದರಿ ಪ್ರಕರಣದ ಪಿರ್ಯಾದಿದಾರರು ಹಾಗೂ ತನಿಖಾಧಿಕಾರಿಗಳು ನಮ್ಮ ಮೇಲಾಧಿಕಾರಿಗಳು ಆಗಿರುತ್ತಾರೆ. ಪಂಚರನ್ನು ಹೊರತುಪಡಿಸಿ ಉಳಿದೆಲ್ಲವರು ನಮ್ಮ ಸಿಬ್ಬಂದಿಗಳು ಆಗಿದ್ದಾರೆ. ಘಟನೆಯ ದಿನ ನಾನು ಕರ್ತವ್ಯದಲ್ಲಿದ್ದ ಬಗ್ಗೆ ಚಲನ ವಲನ ಪುಸ್ತಕದಲ್ಲಿ ನಮುದು ಇದ್ದು ಅದನ್ನು ನಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಬೆಳಿಗ್ಗೆ 5.40 ಗಂಟೆಗೆ ನಾನು ಗುನ್ನಾ ಸ್ಥಳಕ್ಕೆ ಹೋಗಿರುತ್ತೇವೆ. ಗುನ್ನಾ ಸ್ಥಳಕ್ಕೆ ಹೋಗಲು ಸ್ವಲ್ಪ ರಸ್ತೆ ಸರಿ ಇರಲಿಲ್ಲ. ಮಾಹಿತಿಯನ್ನು ಸಾರ್ವಜನಿಕರು ನಮಗೆ ನೇರವಾಗಿ ಫೋನ್ ಮೂಲಕ ಗುನ್ನಾ ಸ್ಥಳದಿಂದ 2 ಕಿಮೀ ದೂರದಲ್ಲಿರುವಾಗ ನೀಡಿರುತ್ತಾರೆ. ಸದರಿ ವಿಷಯವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆಗಾಗ ನಾವು ಗುನ್ನಾ ಸ್ಥಳದ ರಸ್ತೆಗೆ ಹೋಗುತ್ತಾ ಇರುತ್ತೇವೆ. ನಮಗೆ ಮಾಹಿತಿ ನೀಡಿದ ವ್ಯಕ್ತಿಯನ್ನು ಸಾಕ್ಷಿದಾರರಾಗಿ ಮಾಡಿಲ್ಲ ಹಾಗೂ ಆತನ ಹೇಳಿಕೆ ಪಡೆದಿಲ್ಲ. ದಾಳಿ ಪೂರ್ವದಲ್ಲಿ ನಮ್ಮ ಅಂಗಜಪ್ತಿ ಮಾಡಿರುತ್ತೇವೆ. ಅಂಗಶೋಧನೆಯ ಪ್ರತ್ಯೇಕ ಪಂಚನಾಮೆ ಮಾಡಿಲ್ಲ. ಗುನ್ನಾ ಸ್ಥಳದ ಸುತ್ತಮುತ್ತ ಯಾವುದೇ ಮನೆಗಳು ಇಲ್ಲಾ. ದಾಳಿ ಮಾಡುವ ಮೊದಲು ನ್ಯಾಯಾಲಯದಿಂದ ಅನುಮತಿ ಪಡೆದಿದ್ದು ಇರಲಿಲ್ಲ ಕಾರಣ ಅಷ್ಟು ಕಾಲಾವಕಾಶ ಇರಲಿಲ್ಲ. ಪಂಚನಾಮೆಯನ್ನು ಚಾಸಾ 1 ರವರು ಬರೆದಿರುತ್ತಾರೆ. ನಮ್ಮ ಮೇಲಾಧಿಕಾರಿಗಳು ತಯಾರಿಸಿದ ಸುಳ್ಳು ಪಂಚನಾಮೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ ದೂರದಲ್ಲಿ ಕೆಲಸ ಮಾಡುತ್ತಿರುವವರನ್ನು ಬಲಾತ್ಕಾರವಾಗಿ ಪಂಚರಾಗಿ ಮಾಡಿ ಅವರ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ಇಲಾಖಾ ವಾಹನದ ಚಾಲಕನನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಸದರಿಯವರು ದಾಳಿಯನ್ನು ನೋಡಿದ್ದು ಇರುವುದಿಲ್ಲ ಕಾರಣ ಅವರು ಜೀಪಿನ ಹತ್ತಿರ ಇದ್ದರು. ಗುನ್ನಾ ಸ್ಥಳದಲ್ಲಿ ಶ್ಯಾಂಪಲನ್ನು ತೆಗೆದಿರುತ್ತೇವೆ. ಶ್ಯಾಂಪಲನ್ನು ತೆಗೆಯಲು ಬಾಟಲಿಗಳು ನಮ್ಮ ತನಿಖಾ ಕಿಟ್ಟನಲ್ಲಿದ್ದವು. ನೀರು ಬಾಟಲಿಗಳನ್ನು ಶ್ಯಾಂಪಲಿಗಾಗಿ ಉಪಯೋಗಿಸಿರುತ್ತೇವೆ. ನಮ್ಮ ಇಲಾಖೆಯಲ್ಲಿಟ್ಟ ಬಾಟಲಿಗಳನ್ನು ಉಪಯೋಗಿಸಿ ಸುಳ್ಳು ಮುದ್ದೆಮಾಲುಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಶ್ಯಾಂಪಲನ್ನು ಪಡೆದಿದ್ದು ಇಲ್ಲಾ ಎಂದರೆ ಸರಿಯಲ್ಲ. ಶ್ಯಾಂಪಲನ್ನು ನಾನೇ ರಾಸಾಯನಿಕ ಕೇಂದ್ರಕ್ಕೆ ಬೆಳಿಗ್ಗೆ 6.00 ಗಂಟೆಗೆ ಬಸ್ಸಿನಲ್ಲಿ ತೆಗೆದುಕೊಂಡು ಹೋಗಿರುತ್ತೇನೆ.

ಟೀಕೇಟನ್ನು ಪಡೆದಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಧಾರವಾಡದ ರಾಸಾಯನಿಕ ಕೇಂದ್ರಕ್ಕೆ ಮದ್ಯಾಹ್ನ 1.30 ಗಂಟೆಗೆ ತಲುಪಿರುತ್ತೇನೆ. ರಾಸಾಯನಿಕ ಕೇಂದ್ರವು ಬಸ್ಸು ನಿಲ್ದಾಣದಿಂದ 3 ಕಿಮಿ ದೂರದಲ್ಲಿದ್ದು ಅಲ್ಲಿ ನಾನು ಆಟೋದಲ್ಲಿ ಹೋಗಿರುತ್ತೇನೆ. ಆಗ ಕಚೇರಿಯಲ್ಲಿ ಸಿಬ್ಬಂದಿಗಳು ಇದ್ದರು. ತನಿಖಾ ವರದಿಯನ್ನು ಅದೇ ದಿನ ನೀಡಿದ್ದು ಇರುತ್ತದೆ. ಯಾವುದೇ ಶ್ಯಾಂಪಲನ್ನು ರಾಸಾಯನಿಕ ಕೇಂದ್ರಕ್ಕೆ ಹೋಗಿದ್ದೆ ಇಲ್ಲಾ ನನ್ನ ಕೋರಿಕೆ ಮೇರೆಗೆ ಸುಳ್ಳು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರಮಾಣಪತ್ರವನ್ನು ನಾವೇ ಸದರಿ ಪ್ರಕರಣಕ್ಕಾಗಿ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಪೋಟೋವನ್ನು ನನ್ನ ಮೊಬೈಲಾದ ವಿವೋ ಮೊಬೈಲಿನಿಂದ ತೆಗೆದಿರುತ್ತೇನೆ. ನನಗೆ ಪೋಟೋ ತೆಗೆಯಲು ತರಬೇತಿಯನ್ನು ನೀಡಿಲ್ಲಾ . ನಾನು ಗುನ್ನಾ ಸ್ಥಳದಿಂದ ಯಾವುದೇ ಪೋಟೋವನ್ನು ತೆಗೆದಿಲ್ಲಾ ಎಂದರೆ ಸರಿಯಲ್ಲ. ಸುಳ್ಳು ಪೊಟೋವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಸೃಷ್ಟಿಮಾಡಿ ಸುಳ್ಳು ಪ್ರಕರಣ ಆರೋಪಿ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳವು ಆರೋಪಿಗೆ ಸಂಬಂಧಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ . ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲ. 3 ಪ್ಲಾಸ್ಟಿಕ್ ಕ್ಯಾನು ಮತ್ತು 2 ಅಲ್ಯೂಮಿನಿಯಂ ಪಾತ್ರೆಯನ್ನು ವಶಪಡಿಸಿಕೊಂಡಿದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಯಾವುದೇ ಮುದ್ದೆಮಾಲುಗಳನ್ನು ನಾವು ಜಪ್ತು ಮಾಡಿಲ್ಲದ ಕಾರಣ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ಅಂಕೆ ಸಂಖ್ಯೆಗಳಿಗೋಸ್ಕರ ದಾಖಲಿಸಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿ ದಾಖಲಿಸಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**